ಸಮುದ್ರ ಮಥನ




## ವಿವರವಾದ ಮಾಹಿತಿ

'ಸಕಲ ರೋಗಕ್ಕೆ ಸಕ್ಕರೆ ಕಾರಣ', ಡಾ. ಶ್ರೀನಿವಾಸ ಕಕ್ಕಿಲ್ಲಾಯ ಅವರ ಮುಖಪುಟ ಲೇಖನ (ಸುಧಾ, ಆ. 10) ಸಕ್ಕರೆ ಬಳಕೆಯಿಂದ ಆಗುವ ಜೀವನಶೈಲಿ ರೋಗಗಳ ಕುರಿತು ವಿವರವಾದ ಮಾಹಿತಿ ನೀಡಿತು. ಹಲವು ಸಂಶೋಧನೆಯ ವರದಿಯನ್ನು ಪರಾಮರ್ಶಿಸಿದಾಗ ಸಕ್ಕರೆ ಬಳಕೆ ತಗ್ಗಲೇ ಬೇಕು ಎಂಬುದು ಕಟು ಸತ್ಯದ ಮಾತು. ಆದರೆ ನಾವು ಸಕ್ಕರೆಯನ್ನು ದಿನಂಪ್ರತಿ ಬಳಸುತ್ತಾ ಬಂದಿದ್ದೇವೆ. ಈಗ ಹಠಾತ್ತನೆ ನಿಲ್ಲಿಸುವುದು ಕಷ್ಟ. ಮುಖಪುಟ ಚಿತ್ರ ಸಕ್ಕರೆ ಬಳಕೆಯಿಂದ ಆಗುವ ದುಷ್ಪರಿಣಾಮಗಳ ಅಪಾಯ ಸೂಚಕ ಭಾವವನ್ನು ಚಿತ್ರಿಸಿದೆ.

—ಕೆ.ಪಿ. ರಾಮಗುಂಡಿ ಬೈಲಹೊಂಗಲ, ಸು.ವಿಜಯಲಕ್ಷ್ಮಿ ಶಿವಮೊಗ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ

## ಆಹ್ವಾನ..?

'ನಮಗೆ ಸಕ್ಕರೆಯ ಅಗತ್ಯವಿಲ್ಲ' ಎಂದು ಸಾರಿ ಸಾರಿ ಹೇಳುವ ಡಾ.ಕಕ್ಕಿಲ್ಲಾಯರ ಈ ಲೇಖನ ಸೊಗಸಾಗಿದೆ. ಆದರೆ ಪುಟಪುಟದಲ್ಲೂ ಕಾಣುವ ಸಿಹಿತಿಂಡಿಗಳ ಚಿತ್ರಗಳು ಹಾಗೂ ಆನಂದಿಸುತ್ತಿರುವ ಮಕ್ಕಳು, ಹಿರಿಯರ ಮುಖಗಳನ್ನು ನೋಡಿದಾಗ ಇನ್ನಷ್ಟು ಸಿಹಿ ತಿನ್ನಲು ಆಹ್ವಾನಿಸುತ್ತಿದ್ದಾರೋ ಎನಿಸುವುದು ಸುಳ್ಳಲ್ಲ.

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ

—ಎ. ಜಾನಕಿರಾಮ್ ಬೆಂಗಳೂರು

## ಕಥೆ ಚೆನ್ನಾಗಿದೆ

'ಗಂಗೆಯ ಕಾಶೀಯಾತ್ರೆ' (ಸುಬ್ರಾಯ ಭಾಗವತ್) ಕಥೆ ಚೆನ್ನಾಗಿದೆ. ಚಿತ್ರವೂ ಚೆನ್ನಾಗಿ ಮೂಡಿಬಂದಿದೆ.

—ರಾಜಶೇಖರ ಹಾದಿಮನಿ ಧಾರವಾಡ, ಎಸ್.ವಿಜಯಕುಮಾರಿ ಬೆಂಗಳೂರು

## ಅಚ್ಚರಿ, ಖುಷಿ..

ವಂಡರ್‌ಪುಟದಲ್ಲಿ 'ರೈನ್‌ಬೊ ಟ್ರೀ' (ಯು. ಅನಂತ್) ಚಿತ್ರ ಬರಹ ನೋಡಿ ಪ್ರಕೃತಿಯ ಅದ್ಭುತ ಸೃಷ್ಟಿ ಖುಷಿ ತಂದಿತು. ಜತೆಗೆ ಅಚ್ಚರಿಯೂ..

—ರತ್ನಾಕರ ಹೆಗಡೆಕಟ್ಟೆ ಮೂಡಬಿದರೆ

## ಖುಷಿ ಕೊಟ್ಟಿತು

'ಕೊಚ್ಚಿನ್ ಎಂಬ ಚೆಲುವೆ' (ಹರೀಶ್ ಹಳೆಮನೆ) ಚಿತ್ರ ಲೇಖನ ತುಂಬ ಖುಷಿ ಕೊಟ್ಟಿತು.

—ಪಿ.ಜಯವಂತ ಪೈ ಕುಂದಾಪುರ

## 'ಮುಗಿಲಿಗೇರಿದ ತಾರೆ'

ವಿಜ್ಞಾನಿ ಯು.ಆರ್. ರಾವ್ ಕುರಿತ 'ಮುಗಿಲಿಗೇರಿದ ತಾರೆ' (ಎಂ.ಅಬ್ದುಲ್ ರೆಹಮಾನ್ ಪಾಷ) ಬರಹ ಓದಿ ರಾವ್ ಅವರ ಅಸಾಮಾನ್ಯ ಸಾಧನೆ ಊಹೆಗೂ ನಿಲುಕದ್ದು ಎನಿಸಿತು.

—ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು, ಲಲಿತಾ ಅಂಬಾಗಿಲು ಉಪ್ಪುಂದ, ಮುಕುಂದ ಹೆರಕಲ್ಲ ಕಲಬುರಗಿ

## ವಿಚಾರ ಲಹರಿ

'ವಿಚಾರ ಲಹರಿ'ಯಲ್ಲಿ 'ಅರಿವಿನ ಅರಿವು ಸತ್ಯ' (ತೋಪ) ಬರಹದಲ್ಲಿ ಲೇಖಕರು 'ಕೃಷ್ಣ–ಸುಧಾಮ'ರ ಅರಿವಿನ ವ್ಯಾಪ್ತಿಯನ್ನು ಸತ್ಯದ ಅರಿವಿರುವವರಿಗೆ ಅರ್ಥವಾಗುವಂತೆ ವಿವರಿಸಿದ್ದಾರೆ.

—ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ, ಬಾಳ್ನುಪೇಟೆ ನೀಲಕಂಠಪ್ಪ ಹಾಸನ

## ಸಕಾಲಿಕ

'ನಿಮ್ಮೊಡನೆ'ಯಲ್ಲಿ 'ಸ್ವಾಗತಾರ್ಹ ತೀರ್ಪು' (ರಘುನಾಥ ಚ.ಹ.) ಬರಹ ಸಕಾಲಿಕ.

—ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಮಹಾವೀರ ಕಾಸರ ಶಿವಮೊಗ್ಗ

## ಸಾಹಸಗಾಥೆ

'ಮಹಿಳಾ ಕ್ರಿಕೆಟ್ ಕಣ್ಮಣಿಗಳು' (ಗಿರೀಶ್ ದೊಡ್ಡಮನಿ) ಲೇಖನ ಖುಷಿ ತಂದಿತು. ವಿಶ್ವಕಪ್ ಫೈನಲ್‌ನಲ್ಲಿ ಸೋತರೂ ಈ ಮಹಿಳೆಯರು ತೋರಿದ ಛಲ ಮೆಚ್ಚುವಂಥದ್ದು. ಇವರ ಸಾಹಸಗಾಥೆ ಎಲ್ಲರಿಗೂ ಸ್ಫೂರ್ತಿ.

—ರವೀಂದ್ರನಾಥ ಶಿ. ಯಡಹಳ್ಳಿ

## ಜೀನ್ಸ್ ಉಡುಪು

'ಸರ್ವಂ ಜೀನ್ಸ್ ಮಯಂ' (ಸವಿತಾ ಶಾಂತಪ್ರಿಯ) ಬರಹ ಚೆನ್ನಾಗಿದೆ. ಅಲ್ಪ ಪ್ರಮಾಣದ ವಿರೋಧ, ಸಮಸ್ಯೆಗಳ ನಡುವೆಯೂ ಸಮವಸ್ತ್ರದಂತೆ ತಾರತಮ್ಯಗಳನ್ನು ಮೀರಿ ನಿಂತು ಸಾರ್ವಕಾಲಿಕ, ಸಾರ್ವಜನಿಕವಾದ ಉಡುಪು ವಿಶಿಷ್ಟವಾದ ಜೀನ್ಸ್ ಉಡುಗೆ.

—ನರೇಂದ್ರ ಸಿರಕಜೆ ಮೈಸೂರು

## ಉಪಯುಕ್ತ ಲೇಖನ

'ರಕ್ತ ಕ್ಯಾನ್ಸರ್; ಭಯ ಬೇಡ' (ಡಾ.ವಿ. ಭಾಸ್ಕರ್) ಲೇಖನ ತುಂಬ ಉಪಯುಕ್ತ ಹಾಗೂ ಕ್ಯಾನ್ಸರ್ ರೋಗಿಗಳಿಗೆ ಧೈರ್ಯ ತರುವಂತಿದೆ.

—ಗಾಣಧಾಳು ರಾಮಣ್ಣ ಚಿತ್ರದುರ್ಗ

## ರಸವತ್ತಾಗಿದೆ

'ಆಸ್ಟ್ರೇಲಿಯಾದ ಚಿನ್ನದ ಕರಾವಳಿ' (ಪ್ರಕಾಶ ಶೆಟ್ಟಿ) ಲೇಖನದಲ್ಲಿ ಆಸ್ಟ್ರೇಲಿಯಾದವರಿಗೂ, ನಮ್ಮ ದೇಶದವರಿಗೂ ಇರುವ ಸಾಮ್ಯವನ್ನು ವ್ಯಂಗ್ಯಚಿತ್ರದೊಂದಿಗೆ ರಸವತ್ತಾಗಿ ವರ್ಣಿಸಿದ್ದಾರೆ.

—ಸುಂದರ್ ಬೆಂಗಳೂರು

